ಪಾರ್ಕಿನ ಮರಗಳ ನಡುವೆ ಸ್ವಾಮಿ ವಿವೇಕಾನಂದರು ಕೈಕಟ್ಟಿಕೊಂಡು ತಲೆಯೆತ್ತಿ ನಿಲ್ಲುವ ದಿನ ನಡೆಯಲಿರುವ ಉದ್ಘಾಟನಾ ಸಮಾರಂಭದ ಹೊತ್ತಿಗೆ ಕಡೇ ಪಕ್ಷ ಹತ್ತು ಲಕ್ಷ ರುದ್ರಣ್ಣನವರ ಕೈ ಸೇರುತ್ತದೆಂದು ರಾಮರಾಯ ಲೆಕ್ಕ ಹಾಕಿ ತೋರಿಸಿದ್ದ. ಟ್ರಸ್ಟಿನ ಕೆಲಸಕ್ಕೆಂದು ಬೇರೆ ಊರುಗಳಿಗೆ ಪ್ರವಾಸ ಹೋಗಲಿ, ಹೋಗದಿರಲಿ, ಪ್ರತಿವಾರ ಟ್ರಾವೆಲ್ ಬಿಲ್ ಕ್ಲೈಮ್ ಮಾಡುವ ದಾರಿಗಳನ್ನೂ ರಾಮರಾಯ ರುದ್ರಣ್ಣನವರಿಗೆ ತೋರಿಸಿಕೊಟ್ಟ.

ಸರ್ಕಾರಿ ಆಫೀಸಿನಲ್ಲಿ ಅಧಿಕಾರಿಯಾಗಿದ್ದಾಗ ಸುಮಾರಾಗಿ ಹಾನೆಸ್ಟಾಗಿದ್ದು, ಸಣ್ಣಪುಟ್ಟ ಕೈ ಚಳಕಗಳಲ್ಲಿ ಮಾತ್ರ ಭಾಗಿಯಾಗಿ, ಒಂದಿಷ್ಟು ಸುಳ್ಳುಪಳ್ಳು ಟಿ.ಎ., ಡಿ.ಎ., ಅಥವಾ ಪರ್ಚೇಸಿಂಗಿನ ಜುಜುಬಿ ಕಮಿಷನ್ನುಗಳಿಗಷ್ಟೇ ಕೈ ಒಡ್ಡುತ್ತಾ ಹೆಚ್ಚುಕಡಿಮೆ ಗಣ್ಯ ವ್ಯಕ್ತಿಯಾಗೇ ಉಳಿದಿದ್ದ ಈ ರುದ್ರಣ್ಣ ಎಂಬ ಹುಳಾ ಪಾರ್ಟಿ ಏಕಾಏಕಿ ಇಷ್ಟು ದೊಡ್ಡ ತಿನ್ನಬಾಕನಾಗಿದ್ದು ಕಂಡು ಟ್ರಸ್ಟಿನ ಎಲ್ಲರಿಗೂ ದಿಗ್ಭ್ರಮೆಯಾಯಿತು. ಟ್ರಸ್ಟಿನ ಸದಸ್ಯರಲ್ಲಿ ಅನೇಕರು ತಂತಮ್ಮ ಆಫೀಸುಗಳಲ್ಲಿ ರುದ್ರಣ್ಣನವರನ್ನೂ ಮೀರಿಸುವಂತೆ ಕಂಠಮಟ್ಟ ತಿಂದವರಾದ್ದರಿಂದ, 'ಇವನೂ ತಿಂದ್ಕೊಂಡು ಸಾಯಲಿ ಬಿಡಿ' ಎಂದು ಗೊಣಗಿಕೊಂಡು ಸುಮ್ಮನಾದರು. ಆದರೆ, ರುದ್ರಣ್ಣನವರ ದಾಹ ದಿನೇ ದಿನೇ ಹೆಚ್ಚುತ್ತಲೇ ಇರುವುದನ್ನು ಕಂಡು ಟ್ರೆಷರರ್ ಶಾಮಾಚಾರಿಗೆ ತೀರಾ ರೇಗಿದ ದಿನ ಮಾತ್ರ, 'ಈ ಮುದಿಯನಿಗೆ ಎಲ್ಲೋ ಸಾಯುವ ಕಾಲ ಹತ್ತಿರ ಬಂದಂಗಿದೆ' ಎಂದು ರಾಮರಾಯನ ಎದುರೇ ಗೊಣಗಿಬಿಟ್ಟಿದ್ದ; ಶಾಮಾಚಾರಿಯ ಗೊಣಗನ್ನು ಕೇಳಿದ ರಾಮರಾಯ ತೀರಾ ನೊಂದವನಂತೆ ಈ ಗೊಣಗನ್ನು ರುದ್ರಣ್ಣನವರೆದುರು ಪಿಸುಗುಟ್ಟಿದಾಗ ಪ್ರಭುದೇವಸ್ವಾಮಿಗಳ ಕಾರಣಿಕ ಮತ್ತೆ ಅವರ ಕಿವಿಯಲ್ಲಿ ಗುಂಯ್ ಗುಟ್ಟತೊಡಗಿತು; ಆವತ್ತು ಮಾತ್ರ ತೀರಾ ಹೆದರಿಕೆಯಾಗಿ, ಆ ದಿಗಿಲು ಮರೆಯಲು ಸಂಜೆ ಅಪರೂಪಕ್ಕೆ ಸ್ವಂತ ಕಾಸಿನಲ್ಲಿ ಗುಂಡು ಹಾಕಿ ನಿರಾಳವಾಗಿ ನಕ್ಕ ಮೇಲೆ ಸಾವಿನ ಭಯ ತಲೆಯಿಂದ ಹಾರಿಹೋಯಿತು.

ಪ್ರಭುದೇವಸ್ವಾಮಿಗಳ ಕಾರಣಿಕ ಬಂದ ಒಂದೇ ವರ್ಷದಲ್ಲಿ ರುದ್ರಣ್ಣನವರ ಹಳೆಯ ಸೇವಿಂಗ್ಸೂ ಸೇರಿ, ಅದರ ಜೊತೆಗೆ ಹೊಸ ಕಮಿಷನ್ನುಗಳೂ ಹನಿಹನಿಗೂಡಿ ಕೋಟಿ ರೂಪಾಯಿಯ ಟಾರ್ಗೆಟ್ ಇನ್ನೇನು ಹತ್ತಿರ ಹತ್ತಿರವಾಗತೊಡಗಿತ್ತು. ಆದರೂ ಮುಂದೆ ಇಷ್ಟು ಸಾಕಾಗುತ್ತದೋ ಇಲ್ಲವೋ? ಇಳಿ ವಯಸ್ಸಿನಲ್ಲಿ ಬರಬಾರದ ಕಾಯಿಲೆಗಳು ಬಂದರೆ ಈ ಹಣ ಯಾತಕ್ಕೂ ಸಾಕಾಗುವುದಿಲ್ಲ ಎಂಬ ಆತಂಕ ಮುತ್ತತೊಡಗಿತು; ತನ್ನ ಬದುಕೇ ಕೊನೆ ತಲುಪುತ್ತಿರುವಾಗ ಇನ್ನು ಯಾವ ಕಾಯಿಲೆ ತಾನೇ ಏನು ಮಾಡೀತು ಎಂಬ ಹುಸಿ ವೈರಾಗ್ಯ ಹುಟ್ಟಿದರೂ, ದುಡ್ಡು ಹೆಚ್ಚಾಗುತ್ತಿರುವುದರ ಬಗೆಗಿನ ಆತಂಕವೂ ಯಾಕೋ ಹೆಚ್ಚತೊಡಗಿತು. ಮೊದಲೆಲ್ಲ ಇಂಥ ಗುಟ್ಟಾದ ಭಯಗಳನ್ನು ತೋಡಿಕೊಳ್ಳಲು ಅವರಿಗೆ ಇದ್ದ ಆತ್ಮೀಯರೆಂದರೆ ಪ್ರಭುದೇವಸ್ವಾಮಿಗಳೊಬ್ಬರೇ. ಆದರೆ, ಆ ಹಾಳು ಕನಸಿನ ನಂತರ ಈ ವರ್ಷ ಪ್ರಭುದೇವಸ್ವಾಮಿಗಳ ಕಡೆಗೆ ಹೋಗಲು ರುದ್ರಣ್ಣನವರ ಕಾಲು ಮೇಲೇಳಲೇ ಇಲ್ಲ. ಮೈ ಉರಿದೆದ್ದು, ರೇಗಿ, ಸ್ವಾಮಿಗಳ 'ನಾವು ಹೇಳತಕ್ಕಂಥಾ...' ಶೈಲಿಯ ಭಾಷೆಯನ್ನು ಒಳಗೊಳಗೇ ಆಡಿಕೊಂಡು ನಕ್ಕರು. ಆದರೂ 'ಆ ಸ್ವಾಮಿ ಇದ್ದಕ್ಕಿದ್ದಂತೆ ಎಲ್ಲಾದರೂ ಸಿಕ್ಕರೇನು ಗತಿ!' ಎಂಬ ಭಯ ಮುತ್ತಿ ಆ ಕನಸು ಬಿದ್ದ ವರ್ಷವಿಡೀ ಸ್ವಾಮಿಗಳ ಮಠವಿದ್ದ ಜಿಲ್ಲೆಗೇ ಕಾಲಿಡದಂತೆ ಎಚ್ಚರ ವಹಿಸತೊಡಗಿದರು.

ಈ ಎಚ್ಚರಿಕೆಯ ಪ್ರಯತ್ನಗಳೆಲ್ಲ ಒಂದೇಟಿಗೆ ಕೊಚ್ಚಿಕೊಂಡು ಹೋಗುವಂತೆ ಕೊನೆಗೂ ಒಂದು ರಾತ್ರಿ ಪ್ರಭುದೇವಸ್ವಾಮಿಗಳು ರುದ್ರಣ್ಣನವರ ಊರಿನಲ್ಲೇ ಮೊಕ್ಕಾಂ ಮಾಡಲು ಬರಲಿರುವ ಸುದ್ದಿ ಬಂದೆರಗಿತು. ಇನ್ನು ಈ ಮನೆಹಾಳು ಸ್ವಾಮಿಯಿಂದ ಮುಕ್ತಿಯಿಲ್ಲ ಎಂದು ಕಂಗಾಲಾದ ರುದ್ರಣ್ಣ ಅವತ್ತೇ ಊರು ಬಿಡಲು ತಯಾರಾದರು; ಯಾವುದೋ ಇಂಟರ್‌ನ್ಯಾಷನಲ್ ಟ್ರಸ್ಟಿನ ಅರ್ಜೆಂಟ್